ಮೈದಾನದಲ್ಲಿ ಅವಳ ಕೂರಿಸಿ ಶುರು ಮಾಡು ಎಂದೆ. ಅವಳಿಗೆ ಹೀಗೆ ಹೊರಗೆ ಕೂತು ಬಯಲ ಶೌಚಪೂರ್ಣಗೊಳಿಸುವ ತರಬೇತಿ ಇರಲಿಲ್ಲ. ಹೀಗಾಗಿ ''ಬಾಗಿಲು ಹಾಕಪ್ಪ, ಶೇಮ್ ಶೇಮ್ ಆಗುತ್ತೆ'' ಎಂದಳು. ''ನಾನು ಗುಡ್ಡದಂತೆ ಅಡ್ಡ ಇದ್ದೀನಿ. ನಾನೇ ಬಾಗಿಲು'' ಎಂದೆ. ನಕ್ಕು "ಫುಸ್ ಫುಸ್ ನೀರಿನ ನಲ್ಲಿ ಎಲ್ಲಿದೆ ಹೇಳು" ಎಂದಳು. "ಅದೆಲ್ಲಾ ಆಮೇಲೆ ಬರುತ್ತೆ ನೀನೀಗ ಶುರುಹಚ್ಚು" ಎಂದೆ. "ಕತ್ತಲಿದೆ ಲೈಟಿಲ್ಲ" ಎಂದು ಕೊಸರಿದಳು. "ಈ ಕೆಲಸಕ್ಕೆ ಬೆಳಕೆಲ್ಲಾ ಬೇಡ ಪುಟ್ಟಾ, ಕತ್ತಲೇನೆ ಒಳ್ಳೆಯದು" ಎಂದೆ. "ಭೂ... ಬೂ ಬಂದರೆ" ಎಂದಳು. "ದೆವ್ವಗಳು ಇಂಥ ಕಡೆ ಬರಲ್ಲ ಪಾಪು. ಬಂದರೆ ಇಲ್ಲಿನ ವಾಸನೆಗೇ ಸತ್ತು ಹೋಗುತ್ತವೆ" ಎಂದೆ. "ಹೆದರಿಕೆ ಆಗುತ್ತೆ ಪಪ್ಪಾ, ನೀನು ಪಕ್ಕ ಬಂದು ಕೂತ್ಕೋ" ಎಂದು ಆಹ್ವಾನಿಸಿದಳು. "ಬಂದ ಕೆಲಸ ಮುಗಿಸು ಅಂದರೆ ಸುಮ್ನೆ ತಲೆ ತಿಂತಿದೀಯಾ. ಇಲ್ಲೇ ನಿಂತಿದ್ದೀನಲ್ಲ ಪುಟ್ಟಾ" ಎಂದೆ. "ಇಲ್ಲಿ ನೀರಿಲ್ಲ ಪಪ್ಪಾ ನೀರು ಬೇಕು" ಎಂದಳು. "ಹಾಗಿದ್ದರೆ ಇಲ್ಲೇ ಕೂತಿರ್ತೀಯಾ ಪುಟ್ಟಾ. ಅಗೋ ನಾವು ನಿಂತಿದ್ದವಲ್ಲ ಆ ಅಂಗಡಿಯಿಂದ ತಕ್ಷಣ ನೀರು ತರ್ತೀನಿ. ನೀನು ಹೆದರಲ್ಲ ಅಂದ್ರೆ ಹೋಗ್ತೀನಿ" ಎಂದೆ. ಅವಳು ಆಯ್ತೆಂದು ಧೈರ್ಯವಾಗಿ ಕತ್ತು ಕುಣಿಸಿದಳು. ಅವಳ ಆಶ್ವಾಸನೆಯನ್ನು ನಾ ನಿಜವೆಂದು ಒಪ್ಪಿದೆ.

ಒಮ್ಮೊಮ್ಮೆ ಮಕ್ಕಳು ಹೀಗೆಯೇ ನೋಡಿ. ಒಂದು ಎರಡು ಮಾಡದಿದ್ದರೂ ಮಾಡಿಯೇ ತೀರುತ್ತೇವೆಂದು ಸರಿರಾತ್ರಿ ಕೊಂಯ್ ಎನ್ನುತ್ತಾ ಸುಖನಿದ್ದೆಯಿಂದ ಎಬ್ಬಿಸುತ್ತವೆ. ಕೊನೆಗೆ ಎಷ್ಟೊತ್ತು ಕಾದರೂ ಏನೊಂದೂ ಮಾಡದೆ ಕಾಲಹರಣ ಮಾಡಿ ನಿರಾಶೆಗೊಳಿಸುತ್ತವೆ. ನಿದ್ರೆ ಕೆಡಿಸಿದ ಸಿಟ್ಟಿಗೆ ತಲೆಮೇಲೆ ಬಡಿಯಬೇಕೆನಿಸಿದರೂ ನಮ್ಮ ಮಕ್ಕಳೆಂದು ಸುಮ್ಮನಾಗುತ್ತೇವೆ. ಅದೇ ಕಂಡವರ ಮಕ್ಕಳಾದರೆ ಇಷ್ಟೊಂದು ದಯಾ ದಾಕ್ಷಿಣ್ಯ ಖಂಡಿತಾ ತೋರಿಸುವುದಿಲ್ಲ.

ಒಮ್ಮೆ ಸೂಫಿ ಕೂಡ ಅರ್ಧ ರಾತ್ರಿಯಲ್ಲಿ ಸೂಸೂ ಎಂದು ಅವಳಮ್ಮನ ಎಬ್ಬಿಸುತ್ತಿದ್ದಳು. ಇಂಥ ತುರ್ತುನಿಗಾ ಸೇವೆಗಳನ್ನು ಸದಾ ಸಲ್ಲಿಸಿ ಸುಸ್ತಾಗಿದ್ದ ಪತ್ನಿ ಆ ದಿನ ಗೊರಕೆ ಚಚ್ಚುತ್ತಿದ್ದ ನನ್ನ ಜಿಗುಟಿ ಎಚ್ಚರಿಸಿದಳು. "ನೀನೂ ಅಪ್ಪ ಅಲ್ವಾ? ನಿಂದೇನೂ ಜವಾಬ್ದಾರಿ ಇಲ್ವಾ? ಪಾಪೂನ ಬಾತ್‌ರೂಮಿಗೆ ಕರ್ಕೊಂಡೋಗು" ಎಂದು ಗಡುಸಾಗೇ ಹೇಳಿದಳು. ಆಕೆ ಯಾವತ್ತೂ ಈ ಥರ ಹೇಳಿದವಳೇ ಅಲ್ಲ. ಇವತ್ತು ಯಾವ ಗಾಳಿಸುತ್ತಿಕೊಂಡಿದೆಯೋ ಎಂದು, "ಆಯ್ತು ಕರ್ಕೊಂಡ್ ಹೋಗ್ತಿನಿ. ಇಷ್ಟು ಸಣ್ಣ ವಿಷಯಕ್ಕೆ ಡಿ.ಎನ್.ಎ. ಟೆಸ್ಟ್ ತನಕ ಮಾತಾಡಬೇಡ'' ಎಂದೆ. ಅವಳು ರಗ್ಗೆಳೆದುಕೊಂಡು ಗೋಡೆ ಕಡೆ ಮುಖ ಮಾಡಿದಳು. ಸೂಫಿ "ಸೂಸೂ ಪಪ್ಪಾ ಜಲ್ದಿ... ಜಲ್ದಿ" ಎಂದು ಅಳುತ್ತಿದ್ದಳು. "ಆಯ್ತು ಬಾರೆ, ನಿಂದು ಯಾವತ್ತೂ ಅರ್ಜೆಂಟೆ" ಎಂದು ಎತ್ತಿಕೊಂಡು ಬಚ್ಚಲಿಗೆ ಕರೆತಂದೆ.

ಮಲಗುವಾಗ ಒಂದು ಗೊಂಬೆ ಕೈಲಿಡಿದು ಮಲಗುವುದು ಸೂಫಿಯ ಸ್ವಭಾವ. ಹೀಗಾಗಿ ಕರಡಿಮುಖದ ಗೊಂಬೆ ಹಿಡಿದುಕೊಂಡೇ ಸ್ನಾನಗೃಹಕ್ಕೆ ಬಂದಳು. "ಮಾಡೀಗ ಬೇಗ" ಎಂದು ಗದರಿಸಿ ನಿಂತೆ. ಆಕೆ ಕಣ್ಣು ಉಜ್ಜುತ್ತಾ, "ನಾನಲ್ಲ ಈ ಗೊಂಬೆ ಸೂಸೂ ಮಾಡುತ್ತಂತೆ" ಎಂದಳು. ಅವಳ ಮುಗ್ಧ ಮಾತು ಕೇಳಿ ನಗು ತಡೆಯಲಾಗಲಿಲ್ಲ. ಗೊಂಬೆ ಎಲ್ಲಿಂದ ಸೂಸೂ ಮಾಡುವುದೆಂದು ಆಲೋಚಿಸಿಯೇ ನಗು ಕಿತ್ತುಕೊಂಡು ಬಂತು. ಘೊಳ್ಳೆಂದು ನಕ್ಕು "ಏಯ್ ನಡಿಯೆ ತರ್ಲೆ" ಎಂದು ಎಳೆದುಕೊಂಡು ಬಂದಿದ್ದೆ. ಗೊಂಬೆಗೆ ರೀಸಸ್ ಮಾಡಲು ನಾನು ಅವಕಾಶ ಕೊಡಲಿಲ್ಲ ಎಂದು ಕಾಲಿಗೆ ರಪರಪ ಹೊಡೆದಿದ್ದಳು. ಆ ಪ್ರಸಂಗ ಈಗ ನೆನಪಿಗೆ ಬಂತು. ಮಕ್ಕಳು ಇಂಥ ವಿಷಯಕ್ಕೆಲ್ಲಾ ಸುಳ್ಳು ಹೇಳುತ್ತಾರಾ ಎಂದು ಮತ್ತೊಮ್ಮೆ ಗುಮಾನಿ ಬಂದು, "ಬಂತಾ! ಬಂತಾ!" ಎಂದು ಕೇಳಿದೆ. ಅವಳೇನೂ ಮಾತಾಡಲಿಲ್ಲ.

ಎದುರಿನ ಅಂಗಡಿಗೆ ಓಡಿ ಹೋಗಿ ನೀರು ತರುವುದು ಕೇವಲ ಎರಡು ನಿಮಿಷದ ಕೆಲಸ. ಒಂದು ರಸ್ತೆ ದಾಟಿ ತಿರುಗಿ ಬಂದರೆ ಮುಗೀತು. "ನಾನು ಓಡೋಗಿ ಓಡ್ಬರ್ತೀನಿ ಪುಟ್ಟಾ, ಹೆದರಬೇಡ"